# 5

# ಸಹೋದರರನ ಕುರಿತ ಚಿಂತನೆ

## (1 ಥೆಸಲೊನೀಕ 3:1-8)

ಕುಟುಂಬದಲ್ಲಿ ಜರುಗುವ ಜಯ ಅಥವಾ ಅಘಾತ, ಆಸಕ್ತಿಗೆ ಮೂಲವು ಮತ್ತು ಉದ್ವೇಗದ ಪ್ರತಿಕ್ರಿಯೆಯು ಆಗಿರುತ್ತದೆ. ಕುಟುಂಬದಲ್ಲಿ ಆ ವ್ಯಕ್ತಿಯ ಕುರಿತು ಜೀವನ ಪರ್ಯಾಂತರ ಚಿಂತನೆಯು ಉಂಟಾಗುತ್ತದೆ. ಈ ಚಿಂತನೆಯನ್ನು ನಮ್ಮಲ್ಲಿ ಯಾರೂ ಅಲಕ್ಷಿಸಬಾರದು.

ದೇವರು "ಸಭೆಯ" ಕುರಿತಾಗಿ ವಿವರಣೆ ನೀಡಬೇಕಾದಾಗ, ಕುಟುಂಬದಲ್ಲಿರುವ ಸಂಬಂಧ ಹಾಗೂ ಮನೋಭಾವದ ಉದಾಹರಣೆಯನ್ನು ತನ್ನ ಅನುಯಾಯಿಗಳಿಗೆ ತಿಳಿಸಿರುವನು. ಈ ಕಾರಣದಿಂದ, ಕೌಟುಂಬಿಕ ಆಧಾರವನ್ನು ಹೊಂದಿದವರಾಗಿ ಯೋಚಿಸುತ್ತೇವೆ, ಅನುಭವಿಸುತ್ತೇವೆ, ಮತ್ತು ಕ್ರಿಸ್ತನಲ್ಲಿರುವ ಸಹೋದರ ಸಹೋದರಿಯರೊಂದಿಗೆ ವ್ಯವಹರಿಸುತ್ತೇವೆ.

ಮೊದಲ ಎರಡು ಅಧ್ಯಾಯಗಳ ಆಲೋಚನೆಯು, 3ನೇ ಅಧ್ಯಾಯದಲ್ಲಿಯೂ ಮುಂದುವರಿಯುತ್ತದೆ, ಪೌಲ, ಸೀಲ ಮತ್ತು ತಿಮೊಥೆಯರು ತಮ್ಮ ವಿದ್ಯಾರ್ಥಿಗಳೊಂದಿಗೆ ಹೊಂದಿದ್ದ ಬಾಂದವ್ಯದ ಕುರಿತು ಪುನಃ ನೆನಪು ಮಾಡಲಾಗಿದೆ. ಥೆಸಲೊನೀಕದವರ ಆರಂಭದ ಕ್ರೈಸ್ತ ಜೀವಿತಕ್ಕೆ ಕೃತಜ್ಞರಾಗಿ ಇದ್ದ ಹಾಗೆ, ಅವರ ವರ್ತಮಾನದ ವಿಷಯದಲ್ಲೂ ಯೋಚಿಸುವವರಾಗಿದ್ದರು. ಆ ಚಿಂತನೆಯು ಏಕೆ ಅಷ್ಟು ಆಳವಾಗಿತ್ತು? ಯಾಕೆಂದರೆ ಆ ಪ್ರಸಂಗಿಗಳು ಅವರನ್ನು ತಮ್ಮ ಕುಟುಂಬ ಹಾಗೂ ದೇವರ ಕುಟುಂಬದವರು ಎಂದು ಪರಿಗಣಿಸಿದ್ದರು.

3:1-8ರ, ಆಸಕ್ತಿಯ ತೋರ್ಪಡುವಿಕೆಯನ್ನು ಹಾಗೂ ಚಿಂತನೆಯನ್ನು ಅಧ್ಯಯನ ಮಾಡುವಾಗ, ದೇವರ ಕುಟುಂಬದ ಬಗ್ಗೆ ನಾವುಗಳು ಎಷ್ಟಾಗಿ ಚಿಂತನೆ ಮಾಡಬೇಕು, ನಮ್ಮ ಆತ್ಮೀಕ ಸಹೋದರ ಮತ್ತು ಸಹೋದರಿಯರ ಬಗ್ಗೆ ಚಿಂತನೆಯನ್ನು ಹೇಗೆ ತೋರ್ಪಡಿಸಬೇಕು?

### ಸಂಪರ್ಕವನ್ನು ಮುಂದುವರಿಸಿ (3:1, 2)

ನಮ್ಮ ಕುಟುಂಬದ ಸದಸ್ಯರನ್ನು ಬಿಟ್ಟು ಹೋಗುವಾಗ ಅಥವಾ ಅವರು ನಮ್ಮನ್ನು ಬಿಟ್ಟು ಹೋಗುವಾಗ, ಅವರಲ್ಲಿನ ನಮ್ಮ ಆಸಕ್ತಿಯು ಮುಂದವರಿಯುತ್ತದೆ. ಅನೇಕ ಸಾರಿ ಅದು ಮುಖ್ಯ ವಿಷಯವಾಗುತ್ತದೆ, ಅವರಿಗೆ ಸಹಾಯ ಮಾಡಲು ಅಸಹಾಯಕತೆ ಉಂಟಾಗುತ್ತದೆ. ಅದೇ ರೀತಿಯಲ್ಲಿ ನಾವುಗಳು ನಮ್ಮ ಸಹೋದರರೊಂದಿಗೆ ಇರಲಿ ಅಥವಾ ಅವರಿಂದ ದೂರವಿರಲಿ, ಅವರ ಕುರಿತಾದ ಚಿಂತನೆಯ ಮುಂದುವರಿಯಬೇಕು.

ಅಪೊಸ್ತಲರ ಕೃತ್ಯ 17ರಲ್ಲಿ ಥೆಸಲೊನೀಕದಲ್ಲಿ ಯೆಹೊದ್ಯರಿಂದ ಕ್ರೈಸ್ತ ಪ್ರಸಂಗಿಗಳಿಗೆ ಉಂಟಾದ ಭಯದ ಕುರಿತಾಗಿ ನೋಡುತ್ತೇವೆ. ಈ ಯೆಹೊದ್ಯರು, ಪೌಲ ಮತ್ತು ಇತರರನ್ನು ಬೆರೋಯದವರೆಗೂ ಹಿಂಬಾಲಿಸಿ ಹಿಂಸೆ ನೀಡಿದ್ದನ್ನು ಗಮನಿಸುತ್ತೇವೆ. ಸಹೋದರರು, ಪೌಲನಿಗೆ ಚಿಂತನೆಯನ್ನು ಹೊಂದಿದ್ದರಿಂದ, ಅವನನ್ನು ಅಥೇನಕ್ಕೆ ಕರೆದೊಯ್ದು, ಅವನ ಜೊತೆಗಾರರಿಂದ ಪ್ರತ್ಯೇಕ ಮಾಡಿದರು.

ಎರಡು ಪಟ್ಟಣಗಳಿಂದ ಪೌಲನು ತಪ್ಪಿಸಿಕೊಂಡವನಾಗಿ, ಪರಿಚಯವಿಲ್ಲದ ಪಟ್ಟಣದಲ್ಲಿ ಒಂಟಿಯಾಗಿ ಇರುವಾಗ, ಪೌಲನು ತನ್ನ ಹಿತ ಚಿಂತನೆಯನ್ನು ಮಾಡಿ, ಅವನ ಸಂರಕ್ಷಣೆಗಾಗಿ,

ತನ್ನ ಜೊತೆಯವರು ಅವನ ಜೊತೆಯಲ್ಲಿ ಇರಬೇಕೆಂದು ಬಯಸಬಹುದಿತ್ತು. ಹೇಗೂ, ಅವನು ಥೆಸಲೊನೀಕದ ಹೊಸ ಸಭೆಯ ಕುರಿತಾಗಿ ಚಿಂತನೆ ಮಾಡಿದನು, ಅವನ ಸುತ್ತಲು ಯೆಹೂದ್ಯರಿದ್ದರು ಎಂದು ಚಿಂತನೆ ಮಾಡಿದನು.

ತಿಮೊಥೆಯನನ್ನು ದೇವರ ಸೇವಕನು ಮತ್ತು ತನ್ನ ಜೊತೆ ಕೆಲಸದವನು ಎಂದು ತಿಳಿದ ನಂತರ, ಥೆಸಲೊನೀಕದ ಸೇವೆಗಾಗಿ ತಿಮೊಥೆಯನನ್ನು ಸಾಗ ಕಳುಹಿಸಿದನು. "ನಿಮ್ಮನ್ನು ದೃಢಪಡಿಸುವದಕ್ಕೂ ನಿಮ್ಮ ನಂಬಿಕೆಯ ವೃದ್ಧಿಗಾಗಿ" (3:1, 2). ಪೌಲನ, ಸಹೋದರನಾದ, ತಿಮೊಥೆಯನನ್ನು, ಅವರ ಆತ್ಮೀಕ ಚಿಂತನೆಗಾಗಿ ಕಳುಹಿಸಿದನು. ಫಿಲಿಪ್ಪಿ 2:20ರಲ್ಲಿ ಪೌಲನು, "ಅವನ ಹಾಗೆ ನಿಮ್ಮ ಕಾರ್ಯಗಳನ್ನು ಕುರಿತು ಯಥಾರ್ಥವಾಗಿ ಚಿಂತಿಸುವವರು ನನ್ನ ಬಳಿಯಲ್ಲಿ ಯಾರು ಇಲ್ಲ" ಅಂದನು.

ಪೌಲನು, ಪಟ್ಟಣಗಳನ್ನು ಸಂದಿಸಿ, ಸಭೆಗಳನ್ನು ಸ್ಥಾಪಿಸುವುದೊಂದೆ ಅವನ ಗುರಿಯಾಗಿರಲಿಲ್ಲ, ಅವರನ್ನು ಸಂತೈಸುವದಕ್ಕಾಗಿ, ಮತ್ತು ವೃದ್ಧಿಪಡಿಸುವದಕ್ಕಾಗಿ ಅವರ ಸಂಪರ್ಕದಲ್ಲಿದ್ದನು, ಮತ್ತು ಪತ್ರಿಕೆಯಿಂದಲೂ, ಸ್ವತಃ ಸಂಧಿಸುವದರಿಂದಲೂ ಸಂಪರ್ಕ ಹೊಂದಿದ್ದನು. ಈ ಹೊಸ ಒಡಂಬಡಿಕೆಯ ಪತ್ರಿಕೆಗಳು, ಸಭಾಸ್ಥಾಪನೆಗೆ ಮಾರ್ಗದರ್ಶವನ್ನು ಮತ್ತು ಸಭೆಗಳನ್ನು ವೃದ್ಧಿಪಡಿಸುವದಕ್ಕೂ ಅಗತ್ಯವಿರುವ ಬೆಲೆಯುಳ್ಳ ಮಾದರಿಗಳನ್ನು ನೀಡುತ್ತದೆ, ಕೆಟ್ಟ ಸನ್ನಿವೇಶದಲ್ಲೂ ಸಂತೈಸುವಿಕೆ ನೀಡುತ್ತದೆ.

ಪ್ರಪಂಚಕ್ಕೆ ಕಷ್ಟಗಳ ವಿರುದ್ಧವಾಗಿ ತೊಂದರೆ ಅನುಭವಿಸುತ್ತಿರುವ ಹೊಸ ಸಭೆಗಳನ್ನು ಸಹೋದರರ ಸಂಗಡ ಸಂಧಿಸಿ ಆಧರಿಸುವುದು ಆಶೀರ್ವಾದವಲ್ಲವೇ? ನಾವು ಅವರನ್ನು ತೊರೆದು ಹೋಗುವಾಗ, ಸಂತೈಸುವ ಆತ್ಮನನ್ನು ಹೊಂದಿರುವ ಸಹೋದರರನ್ನು ಅವರ ನಡುವೆ ಕಾಣುವುದು ಆಶೀರ್ವಾದವಲ್ಲವೆ, ಅವರ ಆತ್ಮೀಕ ವೃದ್ಧಿಯಲ್ಲಿ ನಮ್ಮ ಚಿಂತನೆಯನ್ನು ಹಂಚಿಕೊಳ್ಳುವದು ಆಶೀರ್ವಾದವಲ್ಲವೇ ಇತರ ಸ್ಥಳಗಳಿಗೆ ಪ್ರಯಾಣ ಮಾಡುವ ಸಹೋದ ರರು, ಅಲ್ಪಕಾಲ ನಮ್ಮಲ್ಲಿ ತಂಗಿದ್ದು, ಸಹೋದರರನ್ನು ಉತ್ತೇಜಿಸಲು ಅವರ ಕೈಯಲ್ಲಿ ಪತ್ರಿಕೆಗಳನ್ನು ಕಳುಹಿಸಿ ಅವರಿಗೆ ಸಹಾಯಿಸುವದು ಆಶೀರ್ವಾದವಾಗಿರುತ್ತದೆ.

## ವಿರೋಧವು ಸಹಜ ಎಂಬುದನ್ನು ಹೇಳಿ ಇತರರನ್ನು ಎಚ್ಚರಿಸಿ (3:3, 4)

ಥೆಸಲೊನೀಕದವರು ಕ್ರೈಸ್ತರಾದಾಗ, ದೇವರ ವಿರೋಧಿಗಳಿಂದ ತೊಂದರೆಯು ಉಂಟಾಗುವದು ಎಂದು ತಿಳಿಸಲ್ಪಟ್ಟಿದ್ದರು. ಅವರು ಸೈತಾನನಿಂದ ಶೋಧಿಸಲ್ಪಟ್ಟು, ಸತ್ಯವನ್ನು ತೊರೆದು ಬಿಡದ ಹಾಗೆ, ಪೌಲ, ಸೀಲ ಮತ್ತು ತಿಮೊಥೆಯರು ಅವರನ್ನು ಸಿದ್ಧಗೊಳಿಸಿದ್ದರು. ಅವರು ಕ್ರೈಸ್ತರಾದ ನಿಮಿತ್ತ ಹೊಂದಬಹುದಾದ ಹಿಂಸೆಯನ್ನು ಸಹಿಸಿಕೊಳ್ಳಲು, ಅವರನ್ನು ಬೋಧಿಸಿ ಸಿದ್ಧಗೊಳಿಸಿದ್ದರು. ಆ ಬೋಧನೆಯ ಬಗ್ಗೆ ಈ ಪತ್ರವು ನೆನಪನ್ನು ಉಂಟುಮಾಡಿತ್ತು. ಅವರು ಸಂಕಟವನ್ನು ಅನುಭವಿಸಲು ಸಿದ್ಧರಾಗಿರಬೇಕೆಂದು ತಿಮೊಥೆಯನು ನೆನಪು ಮಾಡಿದನು (3:3, 4).

ಜನರಿಗೆ, ಕ್ರೈಸ್ತರಾಗುವ ಕುರಿತು ಬೋಧಿಸುವಾಗ, ಅವರು ಸೈತಾನನ ಶಕ್ತಿಯನ್ನು ತ್ಯಜಿಸುವಾಗ, ಆ ಶಕ್ತಿಗಳು ಅವರನ್ನು ವಿರೋಧಿಸುತ್ತವೆ ಎಂದು ಪ್ರಾಯಶಃ ತಿಳಿಸಿರುವದಿಲ್ಲ. ಸೈತಾನನ ಸೇವಕರುಗಳು ಅವರನ್ನು ಹಿಂಸಿಸುವ ಅನುಭವವನ್ನು ಸಹ ಹೊಂದುವರು. ಈ ಅಕ್ರಮದಿಂದ, ಅಧೈರ್ಯ, ಅವಮಾನ, ಒಂಟಿತನ ದೈಹಿಕ ಹಿಂಸೆ, ನಿಂದೆ, ಅಥವಾ ದೇವರ ಸಲಹೆಗಳು ಕೆಟ್ಟದ್ದನ್ನು ಉಂಟುಮಾಡಿ, ಮತ್ತು ಸೈತಾನನು ಆಕರ್ಷಣೆಯನ್ನು ಹೊಂದಿರುವವನು ಎಂಬ ಆಲೋಚನೆಗಳು ಬರಲು ಸಾಧ್ಯ.

ಇತರರನ್ನು ಮೆಚ್ಚಿಸುವದಕ್ಕಾಗಿ ಜನರು ಪರಿವರ್ತನೆಗೊಂಡಿದ್ದರೆ ಅವರು ಅನೇಕ ಸವಾಲು ಗಳನ್ನು ಎದುರಿಸಿ, ಸೈತಾನನ ಸೇವಕರುಗಳು ಹೆಚ್ಚಾಗಿ ಇರುವವರು ಎಂದು ತಿಳಿಯುವರು. ಒಂದು ವೇಳೆ ಅವರು ದೇವರನ್ನು ಮಾತ್ರ ಮೆಚ್ಚಿಸಲು "ಪರಿವರ್ತನೆ" ಗೊಂಡಿದ್ದರೆ, ಸೈತಾನನು

ಅವರನ್ನು ವಂಚಿಸಲು ಇತರೆ ಜನರ ವರ್ಚನಸ್ಸನ್ನು ಬಳಸುವಾಗ, ಅವರು ದೇವರ ಮೇಲೆ ಅತಿಯಾದ ಅವಲಂಭನೆಯನ್ನು ಹೊಂದಿರುವದರಿಂದ ಅವರ ನಂಬಿಕೆಯು ಬಲವಾಗಿರುತ್ತದೆ. ಅಧ್ಯಾಯ 2ರಲ್ಲಿರುವ, "ಮನುಷ್ಯರನ್ನು ಮೆಚ್ಚಿಸಬೇಕೆನ್ನದೆ, ಹೃದಯವನ್ನು ಪರಿಶೋಧಿಸುವ ದೇವರನ್ನೇ ಮೆಚ್ಚಿಸಬೇಕೆಂಬ" ವಿವೇಕದ ನಿಯಮವನ್ನು ಬರಹಗಾರನು ಬಳಸಿರುವನು (2:4). ಅವರುಗಳು ದೇವರ ಮತ್ತು ಶುಭಸಂದೇಶದ ಪಾತ್ರೆಗಳು ಎಂಬ ಯೋಚನೆಯನ್ನು ಕ್ರೈಸ್ತ ಬೋಧಕರುಗಳು ಒತ್ತಿ ಹೇಳಬೇಕು. ವಿನಃ ತಮಗಾಗಿ ಅನುಯಾಯಿಗಳನ್ನು ಮಾಡಿಕೊಳ್ಳಬಾರದು. ಉಪದೇಶಕರ ವರ್ತನೆಯು, ಇತರರಿಗೆ ಆಕರ್ಷಕವು ಮತ್ತು ಸಾಕ್ಷಿಯು ಆಗಿರುವುದಾದರೆ, ಈ ವರ್ತನೆಗೆ ಮತ್ತು ಸ್ಪೂರ್ತಿಗೆ ದೇವರ ಕೃಪೆಯೇ ಕಾರಣ ವಾಗಿದ್ದು, ದೈವೀಕ ಸ್ವಭಾವದ ವರ್ತನೆಗೆ ಯೇಸುವೇ ಕಾರಣನಾಗಿರುತ್ತಾನೆ.

## ಇತರರ ನಂಬಿಕೆಯ ಕುರಿತು ಅರಿತುಕೊಳ್ಳಿರಿ (3:5)

ಸ್ವಾಭಾವಿಕವಾಗಿ ನಮ್ಮ ದೇಹ ಹಾಗೂ ನಮ್ಮ ದೇವರ ಕುಟುಂಬದ ಸುರಕ್ಷೆಯ ಬಗ್ಗೆ ಚಿಂತನೆ ಮಾಡುತ್ತೇವೆ. ಆದರೆ ಆತ್ಮೀಕ ಸುರಕ್ಷೆ, ಹಾಗೂ ಆತ್ಮದ ನಿತ್ಯವಾದ ಚಿಂತನೆ ಬಹು ಪ್ರಾಮುಖ್ಯವಾದದ್ದು.

ಆ ಥೆಸಲೊನೀಕದ ಹೊಸ ಕ್ರೈಸ್ತರಿಂದ ಬೀಳ್ಕೊಂಡ ನಂತರ, ಪೌಲನು ತನ್ನ ದೇಹದ ಸುರಕ್ಷೆಯ ಬಗ್ಗೆ ಚಿಂತಿಸಲಿಲ್ಲ, ಆದರೆ ಆ ಹೊಸ ಕ್ರೈಸ್ತರ ಆತ್ಮಗಳ ಬಗ್ಗೆ ಚಿಂತಿಸಿದನು. ಆ ಅಪರಿಚಿತವಾದ ಪಟ್ಟಣದಲ್ಲಿ ಒಂಟಿಯಾಗಿರಲು ಭಯಪಡದೆ, ಕ್ರೈಸ್ತರು ದೇವರಿಂದಲೂ ಮತ್ತು ಮನುಷ್ಯರಿಂದಲೂ ದೂರವಾಗಿರುವ ಪರಿಸ್ಥಿತಿಯ ಬಗ್ಗೆ ಚಿಂತಿಸಿದನು. ಅವರ ವೃದ್ಧಿಯ ಕುರಿತು ತಿಳಿಯಲು, ತಡಮಾಡದೆ ತಿಮೊಥಿಯನ್ನು ಕಳುಹಿಸಿದನು, ಅವನು ಅವರ ಆತ್ಮೀಯ ಬೆಳವಣಿಗೆಯ ಕುರಿತು ಸಂದೇಶವನ್ನು ತರುವನು ಎಂದು ಬಯಸಿದನು. ಈ ಕ್ರೈಸ್ತರ ಕುರಿತು ತಿಳಿಯಲು ಅಪೇಕ್ಷಿಸಿದನು!

ದೇವರ ಮುಂದೆ, ಇಂಥ ಆತ್ಮಗಳಿಗಾಗಿ ಚಿಂತನೆಯನ್ನು ಮಾಡುತ್ತಿರುವೆವೇ? ಅವರ ಒಳತಿನ ಬಗ್ಗೆ ಅರಿಯಲು ಅಪೇಕ್ಷಿಸಿರುವೆವೇ? ಅವರ ಒಳತಿನ ಕುರಿತು ಜನರಿಂದ ತಿಳಿಯವೆವೇ? ನನ್ನ ಬಗ್ಗೆ ಅಥವಾ ನನ್ನ ಕುಟುಂಬದ ಬಗ್ಗೆ ತಿಳಿಯಲು ಒಬ್ಬ ಜೊತೆ ಕ್ರೈಸ್ತ ಸೇವಕನು ಬರುವುದಾದರೆ ಅಥವಾ ನನ್ನ ಸಭೆಯ ಒಳಿತನ್ನು ಕೇಳುವುದಾದರೆ, ಅದು ಉತ್ತಮವಾದ ಪ್ರೋತ್ಸಾಹವನ್ನು ನೀಡುವುದಲ್ಲವೇ!

## ಶುಭ ಸಂದೇಶವನ್ನು ಹಂಚಿಕೊಳ್ಳಿರಿ (3:6-8)

ಕುಟುಂಬದವರ ಕುರಿತಾದ ಒಳ್ಳೆಯ ಸುದ್ಧಿಯು ನಮಗೆ ಉತ್ತೇಜನವನ್ನು ಉಂಟು ಮಾಡುವದಲ್ಲವೇ. ಆ ವಿಷಯವು ಸುದ್ಧಿ ಮಾಧ್ಯಮದಲ್ಲಿ ಬಾರದೆ ಇರಬಹುದು, ಆದರೆ ದೇವರು ಅದನ್ನು ತಿಳಿದವನಾಗಿ, ಮನುಷ್ಯರ ಸಂಗಡ ಆತನು ಸಹ ಸಂತೋಷ ಪಡುವನು. ವಿಶ್ವಾಸ ಮತ್ತು ಆತ್ಮೀಕ ವೃದ್ಧಿಯ ವರ್ತಮಾನವನ್ನೇ ನಾವುಗಳು ಹೊಂದಿರಲು, ಇಷ್ಟಪಡುವೆವು?

ಥೆಸಲೊನೀಕದವರ ವಿಶ್ವಾಸ ಮತ್ತು ಪ್ರೀತಿಯ ಅಭಿವೃದ್ಧಿಯ ಶುಭವರ್ತಮಾನವನ್ನು ತೆಗೆದುಕೊಂಡವನಾಗಿ ತಿಮೊಥೆಯನು ಹಿಂದಿರುಗಿದನು! ಅವರ ಬೋಧಕರುಗಳು ಅವರ ಸಂಗಡವಿರಲಿಲ್ಲ, ಅವರ ಬೋಧಕರು ಸಹ ಇದೇ ಅನುಭವವನ್ನು ಹೊಂದಿದ್ದರು! ಪೌಲ ಮತ್ತು ಅವನ ಸಹ ಚರರು ವಿರೋಧ ಮತ್ತು ಹಿಂಸೆಯ ನಡುವೆ ಇರುವಾಗ, ಈ ವರ್ತಮಾನವು ಅವರಿಗೆ ಸಂತೈಸುವಿಕೆಯನ್ನು ನೀಡಿತ್ತು.

ಥೆಸಲೊನೀಕದವರ ಸಂಗಡದಲ್ಲಿ ಅಪೊಸ್ತಲರು ಪಾಲು ತೆಗೆದುಕೊಂಡಿದ್ದರು. ಅದೇ ಸಮಯದಲ್ಲಿ ನಂಬಿಕೆ ಮತ್ತು ಪ್ರೀತಿಯಿಂದ ದೊರಕುವ ಸಂತೈಸುವಿಕೆಯನ್ನು ಅವರು ಹೊಂದಿದ್ದರು ಸಂಕಟದ ನಿಮಿತ್ತ ದುಃಖದ ಬೇಸರದ, ಮಾನಸಿಕ ತೊಂದರೆಯ ಅನುಭವವು

ಕ್ರೈಸ್ತರಿಗೆ ಉಂಟಾಗುವದು ಎಂದು ದೇವರು ತಿಳಿದಿರುವನು. ಸಂಕಷ್ಟದಲ್ಲಿರುವವರನ್ನು ನಂಬಿಕೆ ಮತ್ತು ಪ್ರೀತಿ ಸಂತೈಸುತ್ತದೆ ಎಂದು ಸಹ ದೇವರು ತಿಳಿದಿರುವನು. ದೇವರಲ್ಲಿ ನಂಬಿಕೆ ಇಡದಿದ್ದರೆ, ಮನುಷ್ಯನಿಗೆ ಬೇಸರ ಮತ್ತು ಅಸುರಕ್ಷತೆ ಉಂಟಾಗುತ್ತದೆ. ಪ್ರೀತಿ ಇಲ್ಲದೆ ಇರುವದು ಒಂಟಿತನಕ್ಕೂ ಮತ್ತು ಅಧೈರ್ಯಕ್ಕೂ ನಡಿಸುತ್ತದೆ.

ಅನಿಶ್ಚಿತವಾದ ಲೋಕದಲ್ಲಿ ಜನರು ಜೀವಿಸುತ್ತಿರುವಾಗ, ದೇವರಲ್ಲಿನ ಭರವಸವು ಅವರಿಗೆ ನಿರೀಕ್ಷೆಯನ್ನು ನೀಡುತ್ತದೆ. ಜನರು ದೇವರನ್ನು ಮತ್ತು ಇತರರನ್ನು ಪ್ರೀತಿಸುವುದಾದರೆ, ಅದು ಅವರ ಆತ್ಮಗಳನ್ನು ಚೈತನ್ಯಪಡಿಸಿ ಪ್ರಯೋಜನಕಾರಿಯಾದ ಜೀವಿತವನ್ನು ಉತ್ಪಾದನೆ ಮಾಡುತ್ತದೆ. ಈ ವಿಧವಾದ ಕ್ರೈಸ್ತ ಚಟುವಟಿಕೆಗಳು, ಬೆಲೆಯುಳ್ಳ ಜೀವಿತವನ್ನು ಆರೋಗ್ಯದಾಯಕ ಕುಟುಂಬಗಳನ್ನು ಮತ್ತು ಬಲವಾದ ಸಭೆಗಳನ್ನು ಅಭಿವೃದ್ಧಿಪಡಿಸುತ್ತದೆ.

ಇತರರಿಂದ ಬಂದ ಶುಭವರ್ತಮಾನವು ಅಥೆನದಲ್ಲಿದ್ದ ಪೌಲ ಮತ್ತು ಅವನ ಸಹಚರರಿಗೂ ಆನಂದವನ್ನು ಉಂಟುಮಾಡಿತು! ಅವನು, "ನೀವು ಕರ್ತನಲ್ಲಿ ದೃಢವಾಗಿ ನಿಂತಿದ್ದರೆ ನಮಗೆ ಜೀವಕಳೆ" ಅಂದನು (3:8ಎ). ಬಹಳ ವಿರೋದದ ನಡವೆಯು, ಸೈತಾನ ಪ್ರತಿರೋದದ ನಡುವೆಯೂ ಹೊಸಕ್ರೈಸ್ತರು ದೇವರ ಕಡೆಯಲ್ಲಿ ನಂಬಿಗಸ್ತರಾಗಿ "ಜೀವಿಸುವುದು" ವಿಶೇಷವಾಗಿದೆ! ಇತರರ ಅಭಿವೃದ್ಧಿಯ ಬಗ್ಗೆ ನಾವು ಪುಳಕಿತರಾಗುತ್ತೇವೆಯೇ? ಅವರ ನಂಬಿಕೆಯಿಂದ ನಮಗೆ ಚೈತನ್ಯವಾಯಿತು ಎಂದು ಅವರುಗಳು ಅರಿತಿರುವರೆ? ಈ ಮನೋಭಾವನೆಯನ್ನು ನಾವು ಬೆಳಸಿಕೊಳ್ಳು ವದಾದರೆ, ಅವರೂ ಉತ್ತಮರಾಗಲೂ ಸಾಧ್ಯ ಮತ್ತು ನಾವುಗಳೂ ಉತ್ತಮರಾಗಿರಲು ಸಾಧ್ಯವಾಗುತ್ತದೆ!

## ಮುಕ್ತಾಯ

ಥೆಸಲೊನೀಕ ಸೇವೆಯನ್ನು ಮುಗಿಸುವ ಅಂತ್ಯದಲ್ಲಿ, ಅವರಿಗೆ ಪ್ರತ್ಯೇಕತೆಯ ಒಂಟಿತನದ ಹಾಗೂ ಸಂಪರ್ಕದ ಕೊರತೆಯ ಅನುಭವಗಳು ಆಬೋಧಕರಿಗೆ ಉಂಟಾಯಿತು, ಆದರೆ ಆ ಪಟ್ಟಣದಲ್ಲಿದ್ದ ಯೌವನಸ್ಥರಾದ ದೇವ ಜನರ ನಿಮಿತ್ತ ಅವರ ಆನಂದವು ನಂದಿಹೋಗಲಿಲ್ಲ. "ಪರಿವರ್ತನೆಗೊಂಡ" ಆ ಜನರ ವರ್ತಮಾನವು ಅವರಿಗೆ ಚೈತನ್ಯವನ್ನು ತಂದಿತು, ಅದರ ನಿಮಿತ್ತ ಅವರು ಕೃತಜ್ಞತೆಯ ಪತ್ರವನ್ನು ಬರೆದರು.

ಸಂಪರ್ಕದಕೊರತೆ, ಪ್ರತ್ಯೇಕತೆ ಮತ್ತು ಒಂಟಿತನದ ದೆಸೆಯಿಂದ, ನಮ್ಮಲ್ಲೂ ಪರಿಣಾಮಗಳು ಉದ್ಭವಿಸಬಹುದು. ದೇವಜನರಿಗಾಗಿ, ನಮ್ಮಲ್ಲಿರುವ ಮಾನವೀಯ ಚಿಂತನೆಗಳು, ಮಾನವೀಯ ಸಮಸ್ಯೆಗಳನ್ನು ಎದುರಿಸಿ, ನಮಗೂ ಮತ್ತು ಇತರರಿಗೂ ಆನಂದವನ್ನು ಸಂತೈಸುವಿಕೆಯನ್ನು ತರಲು ಸಾಧ್ಯವಿದೆ. ದೇವರು ನಮ್ಮ ಮೇಲೆ ಇಟ್ಟಿರುವ ಚಿಂತನೆಯು ನಮಗೆ ಸಂತೋಷದ ಪ್ರತಿಬಿಂಬವನ್ನು ನೀಡುತ್ತದೆ. ಎಂಬುದನ್ನು ನಾವು ಅರಿತುಕೊಳ್ಳಬೇಕು. ದೇವರ ಕುಟುಂಬವು ಉಳಿದ ಎಲ್ಲಾ ಕುಟುಂಬಗಳಿಗಿಂತ ಹತ್ತಿರವಾದದ್ದಾಗಿದೆ - ಪ್ರತ್ಯೇಕದ ಸಮಯದಲ್ಲೂ, ದೇವ ಜನರ ವರ್ತಮಾನವನ್ನು ಹುಡುಕಿ ಅದರ ಬಗ್ಗೆ ಹಂಚಿಕೊಳ್ಳಿರಿ!